## ಇಲ್ಲಿಯವರೆಗೆ



ಅವಶೇಷಗಳಡಿ ವ್ಯಕ್ತಿಯ ಮಿಸುಕಾಟ ಕಾಣಿಸುತ್ತದೆ. ರಕ್ಷಣೆಗೆಂದು ಇಬ್ಬನಿ ಹಾಗೂ ಇತರ ಮಹಿಳಾ ವಾರ್ಡನ್‌ಗಳ ಸಹಾಯದಿಂದ ಗಾಯಗೊಂಡಿದ್ದ ಹೆಂಗಸನ್ನು ಹೊರಗೆಳೆಯುತ್ತಾರೆ. ಆಕೆಯನ್ನು ತುರ್ತುಚಿಕಿತ್ಸಾ ಘಟಕಕ್ಕೆ ಸಾಗಿಸಲಾಗುತ್ತದೆ. ಆರು ವರ್ಷದ ಪುಟಾಣಿಯೊಂದು ಮೃತಪಟ್ಟಿರುತ್ತದೆ. ಅದನ್ನು ನೋಡಿದ ತಾಯಿಯ ರೋದನ ಮುಗಿಲುಮುಟ್ಟುತ್ತದೆ. ಮೆಟ್ರೊ ಹೋಗಬೇಕಾದ ತಾಣವಿರುವ ಕಡೆ ಸುರಂಗ ಮತ್ತು ಗಾಲಿಗಳನ್ನು ನಿರ್ಮಾಣ ಮಾಡಬೇಕಾಗುತ್ತದೆ. ಇದನ್ನು ನಿಯಂತ್ರಿಸುವ ಉಪಕರಣ ಎಲ್ಲಿದೆ ಎಂದು ಕುತೂಹಲ ತಡೆಯಲಾಗದೆ ಹನ್ನಾ ಕೇಳುತ್ತಾಳೆ. ಇದನ್ನು ಕೇಳಿದಾಗ ಮುಖ್ಯ ಎಂಜಿನಿಯರ್ ಮುಖದಲ್ಲಿ ಬೆವರಿಳಿಯುತ್ತದೆ. ಶೀತಲ ಕೊಠಡಿಯಲ್ಲಿ ಸುಸ್ಥಿತಿಯಲ್ಲಿರುವ ಸರ್ವರ್‌ಗಳನ್ನು ಪರಿಶೀಲಿಸುತ್ತಾನೆ. ಇನ್ನು ಮುಚ್ಚಿ ಇಡುವುದರಲ್ಲಿ ಅರ್ಥವಿಲ್ಲ ಎಂದು ಎಂಜಿನಿಯರ್ ಅಂದುಕೊಳ್ಳುತ್ತಾನೆ. ಎರಡು ರಾತ್ರಿ ಅವಿಶ್ರಾಂತ ಕೆಲಸ ಮಾಡಿದ ಹನ್ನಾಳಿಗೆ ಕೆಳಹಂತ ತಲುಪಿದಾಗ ನೆಲದ ಮಣ್ಣನ್ನು ಬಾಕ್ಸ್‌ನಲ್ಲಿ ತುಂಬಿಕೊಳ್ಳುವ ಮನಸ್ಸಾಗುತ್ತದೆ. ಇದನ್ನು ಸ್ಮರಣಿಕೆ ರೂಪದಲ್ಲಿ ತುಂಬಿಕೊಳ್ಳುತ್ತಾಳೆ ಈ ತ್ರಿಲೋಕ ಸಂಚಾರಿ ನೀರೆ. ಈ ಮಧ್ಯೆ ಹನ್ನಾಳಿಗೆ ನಾರ್ತ್ ಟ್ರಾಫಿಕ್ ವಾರ್ಡನ್ ಆಗಿರುವ ಅವಿರತ್‌ನ ಪರಿಚಯವಾಗುತ್ತದೆ. ನವಗ್ರಹಕ್ಕೆ ಹೋದರೆ ಹೇಗೆ ಎಂದು ಹನ್ನಾ ಅವಿರತ್ ಅನ್ನು ಕೇಳುತ್ತಾಳೆ. ತನ್ನ ಅಭ್ಯಂತರವಿಲ್ಲ ಎಂದು ಹೇಳಿದ ಅವಿರತ್ ವಾಹನವನ್ನು ಅತ್ತ ಕಡೆ ಚಲಾಯಿಸುತ್ತಾನೆ. ಅವರತ್ –ಹನ್ನಾ ತಮ್ಮಿಬ್ಬರ ವೈಯಕ್ತಿಕ ವಿಚಾರಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ.

ಪ್ರಾರಂಭದಲ್ಲಿ ರೊಬೋ ಕಾಪ್‌ಗಳ ತಳ್ಳುವಿಕೆಗೆ ಪ್ರತಿರೋಧ ತೋರಿಸಿದವನು ನಂತರ ಅವರಿಗೆ ಮಣಿಯಲೇಬೇಕಾದ ಪರಿಸ್ಥಿತಿ ತಲೆದೋರಿ, ರೊಬೋ ಕಾಪ್‌ಗಳ ಸಹಾಯದೊಂದಿಗೆ 'ಸ್ಟ್ಯಾಂಡ್ ಬೈ' ವಾಹನದಲ್ಲಿ ಆಸೀನನಾಗಿದ್ದ. ಅವನನ್ನು ಸಾಗಿಸುವಷ್ಟರಲ್ಲಿ ಅಡಚಣೆಯೊಂದು ನಿವಾರಣೆಯಾಗಿದೆ ಎಂದು ನಿರುಮ್ಮಳಾಗಿ ಕುಳಿತುಕೊಳ್ಳದಂತೆ ಮತ್ತೊಂದೆಡೆ ಚಲನೆ ಕಂಡುಬಂದಿತ್ತು. ಈ ಸೂಚನೆಯು ಆ ಪ್ರದೇಶದ ಸಿ.ಸಿ.ಟಿ.ವಿ.ಯಿಂದ ನಿಯಂತ್ರಣ ಕೊಠಡಿಗೆ ಸಂಪರ್ಕ ಪಡೆದ ಅವಳ ಎಂ.ಪಿ. ವಾಕಿಗೆ ರವಾನೆಯಾಗಿತ್ತು.

ಇಷ್ಟು ಕಡಿಮೆ ಅಂತರದಲ್ಲಿ ಮತ್ತೊಂದು ಪ್ರಕರಣವೇ? ಎಂದು ಆಶ್ಚರ್ಯ ಚಕಿತಳಾಗಿ 'ರಿಯಲ್ ಟೈಮ್'ನಲ್ಲಿ ಆ ಚಲನೆ ಕಂಡುಬಂದ ಪ್ರದೇಶಕ್ಕೆ ತನ್ನ ಎರಡು ರೊಬೋ ಕಾಪ್‌ಗಳೊಂದಿಗೆ ಸಾಗಿದ್ದಳು. ಮನುಷ್ಯಾಕೃತಿಯ ರೊಬೋ ಕಾಪ್‌ಗಳು ಯಾವುದೋ ಸಂಶಯದ ಸೂಚನೆ ಸಿಕ್ಕಂತೆ ಅನುಮಾನಾಸ್ಪದ ವ್ಯಕ್ತಿಗಳಿಗಾಗಿ 360 ಡಿಗ್ರಿ ಸುತ್ತಲೂ ತಲೆ ತಿರುಗಿಸಿ ತಮ್ಮ ದೃಷ್ಟಿ ಹಾಯಿಸುತ್ತಾ ಹನ್ನಾಳ ವಾಹನವನ್ನು ಹಿಂಬಾಲಿಸಿದ್ದವು.

ಈ ಬಾರಿ ರೊಬೋ ಮಾರಾಟ ಅಂಗಡಿಯೊಂದರ ಹೊರಗೆ ಪ್ರದರ್ಶನಕ್ಕಿಟ್ಟ ಮನುಷ್ಯಾಕೃತಿಗಳ ಮೇಲೆ ಯಾರೋ ಘನವಾದ ವಸ್ತುವನ್ನು ಬೀಸಿ ಅದಕ್ಕೆ ಹಾನಿ ಮಾಡಿ ತಪ್ಪಿಸಿಕೊಂಡು ಹೊರಡುತ್ತಿದ್ದಂತಿತ್ತು.

ಸ್ಥಳಕ್ಕೆ ಧಾವಿಸಿದವಳೇ ತನ್ನ ಸಹಾಯಕ ರೊಬೋ ಕಾಪ್‌ಗಳಿಗೆ ಆ ದುಷ್ಕೃತ್ಯವೆಸಗಿದವರನ್ನು ಹಿಂಬಾಲಿಸಲು ಸೂಚನೆ ನೀಡಿ, ತನ್ನ ಎಂ.ಪಿ. ವಾಕಿ ಮೂಲಕ ಆ ಪ್ರದೇಶದ ನಿರ್ಗಮನ ಪಥದ ಲಾಕಿಂಗ್ ವ್ಯವಸ್ಥೆಗೆ ಚಾಲನೆ ನೀಡಿದ್ದಳು. ರೊಬೋ ಕಾಪ್‌ಗಳ ಚಲನೆ ಕಂಡುಬಂದ ದೃಶ್ಯಾವಳಿಗಳನ್ನು ಸೆರೆಹಿಡಿಯುತ್ತಾ ಸಾಗುವಾಗಲೇ ಆ ದುಷ್ಕರ್ಮಿಗಳು ತಪ್ಪಿಸಿಕೊಳ್ಳುವ ಸಲುವಾಗಿ ವೇಗವಾಗಿ ತಮ್ಮ ವಾಹನವೊಂದರೊಳಗೆ ಜಿಗಿದು ಹೊರಹೋಗುವ ಹುನ್ನಾರ ನಡೆಸಿದ್ದರು. ಅಷ್ಟರಲ್ಲಾಗಲೇ ನಿರ್ಗಮನ ಪಥದ ಲಾಕಿಂಗ್ ವ್ಯವಸ್ಥೆ ಚಾಲನೆಗೊಂಡು ಒಂದು ಅಡ್ಡಗೋಡೆ ನೆಲದಿಂದ ಎದ್ದು ಅವರಿಗೆ ತಡೆಯೊಡ್ಡಿತ್ತು.

ರೊಬೋ ಕಾಪ್‌ಗಳು ಅವರನ್ನು ಸಮೀಪಿಸುತ್ತಿದ್ದಂತೆ ಇನ್ನು ಇವರಿಂದ ತಪ್ಪಿಸಿಕೊಂಡು ಹೋಗಲಿಕ್ಕಾಗದೆಂದು ಆ ವಾಹನದೊಳಗಿದ್ದ ದುಷ್ಕರ್ಮಿಗಳಿಗೆ ಮನವರಿಕೆಯಾಗಿತ್ತು. ಕೊನೆಯ ಪ್ರಹಾರವೆಂಬಂತೆ ತಮ್ಮ ಕೈಯಲ್ಲಿದ್ದ ಸಣ್ಣ ಪೆನ್ಸಿಲ್ ಆಕೃತಿಯ ಆಯುಧದಿಂದ ಕಾಪ್‌ಗಳೆಡೆ ತೀಕ್ಷ್ಣ ಲೇಸರ್ ಕಿರಣಗಳನ್ನು ಹರಿಯಬಿಟ್ಟಿದ್ದರು. ಅದರ ತೀವ್ರತೆಗೆ ರೊಬೋಗಳ ಮುಖ ಹಾಗೂ ಎದೆಯ ಭಾಗದಲ್ಲಿ ಊನವುಂಟಾದರೂ ತಮಗೆ ಆಪತ್ತು ತಂದ ವ್ಯಕ್ತಿಗಳೆಡೆ ಮತ್ತಷ್ಟು ತೀವ್ರತೆಯಿಂದ ಮುನ್ನುಗ್ಗಿ ಆ ವಾಹನದ ಬಾಗಿಲನ್ನು ತೆರೆದು ಒಳಗಿದ್ದ ವ್ಯಕ್ತಿಗಳನ್ನು ಹೊರಗೆಳೆದಿದ್ದರು. ಅವರ ವಶದಲ್ಲಿದ್ದ ಆಯುಧಗಳನ್ನು ಕಿತ್ತುಕೊಂಡು ತಮ್ಮ ಹೊಟ್ಟೆಭಾಗದಲ್ಲಿದ್ದ ಪೌಚ್‌ನೊಳಗೆ ಭದ್ರಪಡಿಸಿದ್ದವು. ಅಪಾಯದ ಮುನ್ಸೂಚನೆ ಆಗಲೇ ನಿಯಂತ್ರಣ ಕೇಂದ್ರಕ್ಕೆ ತಲುಪಿ ಕೆಲವೇ ನಿಮಿಷಗಳಲ್ಲಿ ಮತ್ತೊಂದು 'ಸ್ಟ್ಯಾಂಡ್ ಬೈ' ಪಿಕ್ ಅಪ್ ವಾಹನವನ್ನು ಸ್ಥಳಕ್ಕೆ ಕಳುಹಿಸಲಾಗಿತ್ತು.

ಹನ್ನಾ ಕೌತುಕದಿಂದ ವಾಹನದ ಒಳಗಿಂದ ಹೊರಗೆಳೆಯಲಾದ ನಾಲ್ವರು ವ್ಯಕ್ತಿಗಳನ್ನು ಎಣಿಸುತ್ತಿದ್ದಂತೆಯೇ ಅವಳಿಗೆ ಸಣ್ಣ ಅನುಮಾನ ಕೊರೆಯತೊಡಗಿತ್ತು. ಈ ನಾಲ್ವರು ವ್ಯಕ್ತಿಗಳಲ್ಲಿ ಓರ್ವನದು ಪರಿಚಿತ ಮುಖವೆನಿಸಿ ತನ್ನ ನೆನಪಿನ ಬುತ್ತಿಯಲ್ಲಿ ಆ ಮುಖವನ್ನು ನೋಡಿದ ಸ್ಥಳವನ್ನು ಮರುಕಳಿಸಲು ಪ್ರಯತ್ನಿಸಿದಳು.

'ನಿಮ್ಮ ಹೆಸರೇನು? ಎಲ್ಲಿಂದ ಬಂದಿರಿ? ಇಲ್ಲೇನು ಮಾಡುತ್ತಿದ್ದೀರಿ...?' ಪ್ರಶ್ನೆಗಳ ಸುರಿಮಳೆಯನ್ನೇ ಹರಿಯಬಿಟ್ಟವಳನ್ನು ಆ ನಾಲ್ವರು ನೇರವಾಗಿ ನೋಡಲಾಗದೆ ತಲೆ ಬಗ್ಗಿಸಿ ನಿಂತಿದ್ದರು. ನಿಶ್ಶಸ್ತ್ರಗೊಳಿಸಲಾದ ಆ ನಾಲ್ವರನ್ನು ಹೀಗೆ ನೇರವಾಗಿ ಕೇಳಿದರೆ ಆಗದೆಂದು, ಇದಕ್ಕಾಗಿ ಪ್ರತ್ಯೇಕವಾಗಿ ರಚಿತವಾದ ವಿಚಾರಣಾ ತಂಡದ ಸುಪರ್ದಿಗೆ ಇವರನ್ನು ಒಪ್ಪಿಸುವುದು ಒಳಿತೆನಿಸಿತ್ತು. 'ಪಿಕ್ ಅಪ್' ವಾಹನಕ್ಕೆ ಅಂತೆಯೇ ನಿರ್ದೇಶನ ನೀಡಿದಾಗ ಅದು ನಾಗಾಲೋಟದಿಂದ ನಿರ್ದಿಷ್ಟ ಸ್ಥಳಕ್ಕೆ ಧಾವಿಸಿತ್ತು.

ಹನ್ನಾ ಈ ಕೆಲಸಕ್ಕೆ ಕಾಲಿರಿಸಿದಾಗಿನಿಂದ ಇಂತಹ ಪ್ರಕರಣಗಳು ಎದುರಾಗಿದ್ದು ಇದೇ ಮೊದಲು. ಇದರ ಹಿನ್ನೆಲೆ ಏನೆಂದು ಅರಿಯುವ ಕುತೂಹಲವೂ ಅವಳಿಗಿತ್ತು. ಬಹುಶಃ ಈ ರಾತ್ರಿ ಗಸ್ತು ಮುಗಿದ ಬಳಿಕ ತಾನು ಹಿಡಿದಿಟ್ಟ ವ್ಯಕ್ತಿಗಳ ವಿಚಾರಣೆಯಿಂದ ಹೊರಬಂದ ಅಂಶಗಳನ್ನು ತಿಳಿದುಕೊಳ್ಳಬಹುದೆಂದೆನಿಸಿ, ತನ್ನ ರಾತ್ರಿ ಗಸ್ತು ಮುಂದುವರೆಸುವ ಇರಾದೆಯಿಂದ ತನ್ನ ಸಹಾಯಕ ರೊಬೋ ಕಾಪ್‌ಗಳಿಗೆ ಸನ್ನೆ ಮಾಡಿದಳು.

'ಎಕ್ಸ್' ರೊಬೋ ಯಾಕೋ ಹಿಂದಿನ ಲವಲವಿಕೆಯಿಂದಿರದೆ ಕೊಂಚ ನಿತ್ರಾಣಗೊಂಡಂತೆ ಕಾಣಿಸಿತು. ತನ್ನ ಕಾಲುಗಳಿಗೆ ಅಳವಡಿಕೆಯಾದ ಚಕ್ರಗಳನ್ನು ಒಳಗೆಳೆದುಕೊಂಡು ಬದಲಿ ವ್ಯವಸ್ಥೆ ಇದ್ದ ಕಾಲುಗಳ ಮೇಲೆ ಭಾರವನ್ನು ಹಾಕುತ್ತಾ ಅವಳೆಡೆಗೆ ನಡೆದುಬಂದಿತ್ತು.

'ಹನ್ನಾ... ನನ್ನ ಮೇಲೆ ಲೇಸರ್ ಪ್ರಹಾರವಾಗಿದೆ. ನನ್ನ ತಲೆ ಹಾಗೂ ಎದೆಯ ಕವಚವನ್ನು ಬದಲಾಯಿಸುವ ಅವಶ್ಯಕತೆ